# ಪ್ರಾರ್ಥನೆ

# ದೇವೀಸ್ತುತಿ



**ಜಯ ಜಯ ಜಗಜನನೀ ದೇವೀ ಸುರ-ನರ-ಮುನಿ-ಅಸುರ -ಸೇವೀ**
**ಭಕ್ತಿ-ಮುಕ್ತಿ-ದಾಯಿನೀ, ಭಯ-ಹಾರಿಣೀ ಕಾಲಿಕಾ ।**
**ಮಂಗಲ-ಮುದ-ಸಿದ್ಧಿ-ಸದನೀ ಪರ್ವಶರ್ವರೀಶ-ವದನೀ**
**ತಾಪ-ತಿಮಿರ-ತರುಣ-ತರಣೀ ಕಿರಣಮಾಲಿಕಾ ॥ ೧ ॥**

ಹೇ ಜಗಜನನಿ, ಹೇ ದೇವಿ, ಜಯ ಜಯ ! ದೇವತೆ, ನರ, ಮುನಿ, ಹಾಗೂ ಅಸುರರು ನಿನ್ನ ಸೇವೆ ಮಾಡುತ್ತಾರೆ. ನೀನು ಭೋಗ ಹಾಗೂ ಮೋಕ್ಷಗಳನ್ನು ಕರುಣಿಸುವೆ; ಭಕ್ತರ ಭಯವನ್ನು ದೂರ ಮಾಡುವ ಕಾಳಿಕೆ. ಮಂಗಳ, ಸುಖ ಹಾಗೂ ಸಿದ್ಧಿಗಳ ನಿವಾಸವೇ ನೀನಾಗಿರುವೆ. ನಿನ್ನ ಮುಖವು ಹುಣ್ಣಿಮೆಯ ಚಂದ್ರನಂತಿದೆ. ನೀನು ತಾಪತ್ರಯಗಳೆಂಬ ಕತ್ತಲನ್ನು ನಾಶಮಾಡುವ ಸೂರ್ಯನ ಕಿರಣಗಳ ಮಾಲೆಯನ್ನು ಧರಿಸಿರುವೆ.

**ವರ್ಮ ಚರ್ಮ ಕರ ಕೃಪಾಣ, ಶೂಲ-ಶೇಲ-ಧನುಷಬಾಣ**
**ಧರಣಿ ದಲನಿ ದಾನವ-ದಲ ರಣ-ಕರಾಲಿಕಾ**
**ಪೂತನಾ-ಪಿಶಾಚ-ಪ್ರೇತ-ಡಾಕಿನಿ-ಶಾಕಿನಿ-ಸಮೇತ**
**ಭೂತ-ಗ್ರಹ-ಬೇತಾಲ-ಖಗ-ಮೃಗಾಲಿ-ಜಾಲಿಕಾ ॥ ೨ ॥**

ನಿನ್ನ ಶರೀರದಲ್ಲಿ ಕವಚವಿದೆ, ಕೈಗಳಲ್ಲಿ ಖಡ್ಗ, ಗುರಾಣಿ, ತ್ರಿಶೂಲ, ಭರ್ಜಿ, ಬಿಲ್ಲು-ಬಾಣಗಳಿವೆ. ರಣರಂಗದಲ್ಲಿ ಕರಾಳರೂಪವನ್ನು ಧರಿಸಿ ದಾನವರ ಸಮೂಹವನ್ನು ನೀನು ನಾಶಮಾಡುವೆ. ಪೂತನಿ, ಪಿಶಾಚ, ಪ್ರೇತ, ಡಾಕಿನಿ-ಶಾಕಿನಿ ಸಮೇತವಾಗಿ ಭೂತ-ಗ್ರಹ-ಬೇತಾಳ-ಪಕ್ಷಿ-ಮೃಗಗಳನ್ನು ಬಲೆಬೀಸಿ ಹಿಡಿಯುವೆ.

**ಜಯ ಮಹೇಶ-ಭಾಮಿನೀ ಅನೇಕ-ರೂಪ-ನಾಮಿನೀ**
**ಸಮಸ್ತ-ಲೋಕ-ಸ್ವಾಮಿನೀ ಹಿಮಶೈಲ-ಬಾಲಿಕಾ ।**
**ರಘುಪತಿ-ಪದ ಪರಮ ಪ್ರೇಮ ತುಲಸೀ ಯಹ ಅಚಲ ನೇಮ**
**ದೇಹು ಹ್ವೈ ಪ್ರಸನ್ನ ಪಾಹಿ ಪ್ರಣತ-ಪಾಲಿಕಾ ॥ ೩ ॥**

ಮಹೇಶನ ಪತ್ನಿಯಾದ ಶಿವೆ ! ನಿನಗೆ ಜಯವಾಗಲಿ. ನೀನು ಅನೇಕ ನಾಮ-ರೂಪಗಳನ್ನು ಧರಿಸಿರುವೆ. ಸಮಸ್ತ ಜಗತ್ತಿನ ಒಡತಿ ನೀನು. ಹಿಮಾಚಲ ಕನ್ಯೆ ನೀನು. ತುಳಸೀದಾಸನು ಶ್ರೀರಾಮನ ಪಾದಗಳಲ್ಲಿ ಪರಮಪ್ರೇಮ ಹಾಗೂ ಅಚಲವಾದ ನಿಷ್ಠೆಯನ್ನು ಬಯಸುತ್ತಿರುವನು. ನೀನು ಪ್ರಸನ್ನಳಾಗಿ ಅವುಗಳನ್ನು ನನಗೆ ದಯಪಾಲಿಸು. ಶರಣಾಗತರಾದವರನ್ನು ಪಾಲಿಸುವವಳಲ್ಲವೇ ನೀನು?

— ಗೋಸ್ವಾಮಿ ತುಲಸೀದಾಸ

## ಸೂಕ್ತಿಪ್ರಭ — ಜಪಾನೀ ಸೂಕ್ತಿಗಳು

**ಯೌ**ವನವನ್ನು ವಯಸ್ಸಿನಿಂದ ನಿರ್ಧರಿಸಲಾಗದು. ಒಬ್ಬ ವ್ಯಕ್ತಿಯ ಜೀವಚೈತನ್ಯದಿಂದ ಅದನ್ನು ನಿರ್ಧರಿಸಬೇಕು. ಯಾರಲ್ಲಿ ಭರವಸೆ ಇದೆಯೋ ಅವರು ಎಂದಿಗೂ ಯುವಕರೇ. ಯಾರು ಯಾವಾಗಲೂ ಮುಂದೆ ಸಾಗುವರೋ ಅವರು ಎಂದೆಂದಿಗೂ ಸುಂದರರೇ.

— ದಯಿಸಾಕು ಇಕೇದ

**ಸ**ತ್ಯವು ಎಷ್ಟು ಹತ್ತಿರದಲ್ಲಿದೆ ಎಂಬುದನ್ನು ತಿಳಿಯದೆ, ಅದನ್ನು ನಾವು ಬಹಳ ದೂರದಲ್ಲಿ ಹುಡುಕುತ್ತೇವೆ.

— ಹಾಕುಯಿನ್ ಎಕಾಕು

**ಜೀ**ವನದಂಥ ಇಬ್ಬನಿ ಬಿಂದು ಕರಗಿಹೋಗುತ್ತದೆ; ಕಾಲವು ಬೇಗನೆ ಸಾಗುತ್ತದೆ. ನಮ್ಮ ಅಲ್ಪಕಾಲಿಕ ಬದುಕಿನಲ್ಲಿ ಅನಗತ್ಯ ವಿಷಯಗಳಲ್ಲಿ ಮುಳುಗಿಹೋಗಬೇಡ, ಬದಲಾಗಿ ಸತ್ಪಥವನ್ನು ಅರಿತುಕೋ.

— ದೋಜೆನ್ ಝೆಂಜಿ

**ಮ**ರುಭೂಮಿಯನ್ನು ಹಸಿರು ಮಾಡುವುದೆಂದರೆ, ಜನರ ಹೃದಯದಲ್ಲಿ ಬೀಜ ಬಿತ್ತುವುದು, ಈ ಭೂಮಿಯಲ್ಲಿ ಹಸಿರಿನ ನಂದನವನವನ್ನು ಸೃಷ್ಟಿಸುವುದು.

— ಮಸನೋಬು ಫುಕುವೋಕ